# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 404 |
| ಸದಸ್ಯರ ಹೆಸರು | : ಶ್ರೀ ರಘುನಾಥ ರಾವ್ ಮಲ್ಕಾಪೂರೆ |
| ಉತ್ತರಿಸುವ ಸಚಿವರು | : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 06-03-2020 |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್‌ನಿಂದ ಹೈದರಾಬಾದ್ ಮಾರ್ಗವಾಗಿ ಬೆಂಗಳೂರಿಗೆ ಒಟ್ಟು ಎಷ್ಟು ಬಸ್ಸುಗಳು ಸಂಚರಿಸುತ್ತಿವೆ; (ಬಸ್ಸುಗಳ ವಿವರ ನಿಡುವುದು)</td><td>ಬೀದರ್‌ನಿಂದ ಹೈದರಾಬಾದ್ ಮಾರ್ಗವಾಗಿ ಬೆಂಗಳೂರಿಗೆ ಪ್ರತಿ ದಿನ ಒಟ್ಟು 5 ವಾಹನಗಳು ಕಾರ್ಯಾಚರಣೆಯಲ್ಲಿರುತ್ತವೆ. ವಿವರಗಳು ಈ ಕೆಳಗಿನಂತಿರುತ್ತವೆ.
<table>
<tr><th rowspan="2">ಕ್ರ ಸಂ</th><th rowspan="2">ಘಟಕ</th><th rowspan="2">ಅನುಸೂಚಿ ಸಂಖ್ಯೆ</th><th colspan="2">ಮಾರ್ಗ</th><th rowspan="2">ವಾಹನದ ಮಾದರಿ</th><th rowspan="2">ನಿರ್ಗಮನ ಸಮಯ</th></tr>
<tr><th>ಯಿಂದ</th><th>ವರೆಗೆ</th></tr>
<tr><td>1</td><td>ಬೀದರ-1</td><td>5/6</td><td>ಬೀದರ</td><td>ಬೆಂಗಳೂರು</td><td>ನಾನ್ ಎಸಿ ಸ್ಲೀಪರ್</td><td>18.30</td></tr>
<tr><td>2</td><td>ಬೀದರ-1</td><td>178/179</td><td>ಬೀದರ</td><td>ಬೆಂಗಳೂರು</td><td>ರಾಜಹಂಸ</td><td>18.00</td></tr>
<tr><td>3</td><td>ಭಾಲ್ಕಿ</td><td>1/2</td><td>ಭಾಲ್ಕಿ</td><td>ಬೆಂಗಳೂರು</td><td>ರಾಜಹಂಸ</td><td>16.30</td></tr>
<tr><td>4</td><td>ಔರಾದ</td><td>47/48</td><td>ಔರಾದ</td><td>ಬೆಂಗಳೂರು</td><td>ರಾಜಹಂಸ</td><td>15.30</td></tr>
<tr><td>5</td><td>ಬೆಂಗಳೂರು-2</td><td>158/159</td><td>ಬೀದರ</td><td>ಬೆಂಗಳೂರು</td><td>ಐರಾವತ್ ಮಲ್ಟಿ ಎಕ್ಸಲ್</td><td>17.00</td></tr>
</table></td></tr>
<tr><td>ಆ</td><td>ಬೀದರ್‌ನಿಂದ ಬೆಂಗಳೂರಿಗೆ (ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ) ನೇರವಾಗಿ ಹೈದರಾಬಾದ್ ರಿಂಗ್ ರಸ್ತೆಯ ಮೂಲಕವೇ ಹೋಗಲು ಹೊಸದಾಗಿ ಎ.ಸಿ.ಸ್ಲೀಪರ್ ಕೋಚ್ ಬಸ್ ಓಡಿಸಿದಲ್ಲಿ ಬೀದರ್ ಜನರಿಗೆ ಬೆಂಗಳೂರಿಗೆ ಸರಿಯಾದ ಸಮಯಕ್ಕೆ ಹೋಗಲು ಮತ್ತು ಬರಲು ಅನುಕೂಲವಾಗುತ್ತದೆ. ಈ ಅನುಕೂಲ ಮಾಡಿಕೊಡಲು ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು)</td><td>ಬೀದರ್-ಬೆಂಗಳೂರು ಮಾರ್ಗದಲ್ಲಿ (ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ) ನೇರವಾಗಿ ಹೈದರಾಬಾದ್ ರಿಂಗ್ ರಸ್ತೆಯ ಮೂಲಕವೇ ಜುಲೈ-2012ರಿಂದ ನವೆಂಬರ್-2012ರ ಅವಧಿಯಲ್ಲಿ ಪ್ರತಿ ದಿನ ಒಂದು ಎಸಿ ಕರೋನಾ ಸ್ಲೀಪರ್ ಸಾರಿಗೆ ಕಾರ್ಯಾಚರಣೆಯಲ್ಲಿತ್ತು. ಆದರೆ, ಆ ಅವಧಿಯಲ್ಲಿ ಸದರಿ ಸಾರಿಗೆಗೆ ಪ್ರತಿ ಕಿ.ಮೀ.ಗೆ ರೂ.35.00ರಷ್ಟು ಸರಾಸರಿ ವೆಚ್ಚವಾಗಿದ್ದು, ಅದಕ್ಕೆ ಪ್ರತಿಯಾಗಿ ಸಾರಿಗೆ ಆದಾಯ ಪ್ರತಿ ಕಿ.ಮೀ.ಗೆ ಕೇವಲ ರೂ.21.00ರಷ್ಟು ಮಾತ್ರ ಬಂದಿರುತ್ತದೆ. ಸರಾಸರಿ ರೂ.14.00ರಷ್ಟು ಪ್ರತಿ ಕಿ.ಮೀ.ಗೆ ನಷ್ಟ ಉಂಟಾಗಿದ್ದರಿಂದ, ಸದರಿ ಸಾರಿಗೆಯನ್ನು ಸ್ಥಗಿತಗೊಳಿಸಲಾಗಿದೆ.<br><br>ಪ್ರಸ್ತುತ ಬೀದರ್-ಬೆಂಗಳೂರು ನಾನ್ ಎಸಿ ಸಾರಿಗೆಗೆ ಹೈದರಾಬಾದ್ ಬಸ್ ನಿಲ್ದಾಣದಿಂದ ಬೆಂಗಳೂರಿನವರೆಗೆ ವಾರಾಂತ್ಯ ದಿನಗಳಲ್ಲಿ ಸರಾಸರಿ 24 ಜನ ಪ್ರಯಾಣಿಕರು ಹಾಗೂ ಉಳಿದ ದಿನಗಳಲ್ಲಿ ಸರಾಸರಿ 12ರಿಂದ 15 ಜನ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. ಬೀದರ್ ಬಸ್ ನಿಲ್ದಾಣದಿಂದ ಬೆಂಗಳೂರಿಗೆ ವಾರಾಂತ್ಯ ದಿನಗಳಲ್ಲಿ ಸರಾಸರಿ 4 ರಿಂದ 5 ಜನ ಪ್ರಯಾಣಿಕರು ಹಾಗೂ ಉಳಿದ ದಿನಗಳಲ್ಲಿ ಸರಾಸರಿ 2 ರಿಂದ 3 ಜನ ಪ್ರಯಾಣಿಕರು ಮಾತ್ರ ಪ್ರಯಾಣಿಸುತ್ತಿದ್ದಾರೆ. ಬೀದರ್‌ನಿಂದ ನೇರವಾಗಿ (ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ) ಬೆಂಗಳೂರಿಗೆ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿರುತ್ತದೆ. ಆದ್ದರಿಂದ, ಹೈದರಾಬಾದ್ ನಗರದ ಬಸ್ ನಿಲ್ದಾಣದ ಮುಖಾಂತರವೇ ಮೇಲ್ಕಂಡ ಸಾರಿಗೆಗಳನ್ನು ಕಾರ್ಯಾಚರಿಸಲಾಗುತ್ತಿದೆ.<br><br>ಎಸಿ ಸ್ಲೀಪರ್ ಸಾರಿಗೆಯನ್ನು ಸದರಿ ಮಾರ್ಗದಲ್ಲಿ ಹೈದರಾಬಾದ್ ನಗರದ ಬಸ್ ನಿಲ್ದಾಣಕ್ಕೆ ಹೋಗದೆ, ನೇರವಾಗಿ ಹೈದರಾಬಾದ್ ರಿಂಗ್ ರಸ್ತೆಯ ಮೂಲಕ ಹೊಸದಾಗಿ ಕಾರ್ಯಾಚರಣೆ ಮಾಡುವುದು ಸಂಸ್ಥೆಯ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ.</td></tr>
</table>

ಸಂಖ್ಯೆ: ಟಿಡಿ 44 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು